ಶ್ರೀ ಸಿದ್ದಯ್ಯ ಕಾಶೀಮಠ.—ಬಸ್ ರೂಟ್‌ಗಳಿಗೆ ಪರ್ಮಿಟ್ಟುಗಳನ್ನು ಕೊಡುವಾಗ ಯಾವ ಯಾವ ನಿಯಮಗಳನ್ನು ಅನುಸರಿಸುತ್ತಾರೆ ?

Sri R. M. PATIL.—The provisions contained in Chapter IV of the Motor Vehicles Act, 1939, and the rules framed thereunder are followed.

ಶ್ರೀ ಕೆ. ಪಿ. ಗದಗ್.—ಅಂತರರಾಜ್ಯ ಮಾರ್ಗಗಳೇನಿವೆ ಅವನ್ನು ರಾಷ್ಟ್ರೀಕರಣ ಮಾಡುವ ಬಗ್ಗೆ ಸರ್ಕಾರದ ಧೋರಣೆ ಏನು ಎಂದು ಹೇಳುವುದಕ್ಕಾಗುತ್ತದೆಯೇ ಸ್ವಾಮಿ ?

ಶ್ರೀ ಆರ್. ಎಂ. ಪಾಟೀಲ್.—ಈಗಿನ ಧೋರಣೆಯ ಪ್ರಕಾರ ಎಲ್ಲ ಮಾರ್ಗಗಳನ್ನೂ ರಾಷ್ಟ್ರೀಕರಣ ಮಾಡಬೇಕು ಎನ್ನುವುದೇ ಆಗಿದೆ.

ಶ್ರೀ ಕೆ. ಎಸ್. ನೂರ್ಯನಾರಾಯಣರಾವ್.—ಮೈಸೂರು ಜಿಲ್ಲೆಯಿಂದ ಯಾರೂ ಅರ್ಜಿ ಹಾಕಲಿಲ್ಲವೆಂದು ಕೊಡವೆ ಇರುತ್ತೀರಾ ಅಥವಾ ಹಾಕಿದ್ದರೆ ಏಕೆ ಈವರೆಗೂ ಶೀಘ್ರವಾಗಿ ಅವುಗಳನ್ನು ಇತ್ಯರ್ಥ ಮಾಡಿಲ್ಲ ?

ಶ್ರೀ ಆರ್. ಎಂ. ಪಾಟೀಲ್.—ಬೇಗ ಇತ್ಯರ್ಥ ಮಾಡುವುದಕ್ಕೆ ಒಬ್ಬ ಆರ್. ಟಿ. ಓ. ತೀರ್ಮಾನ ಮಾಡುವ ಹಾಗೆ ಇಲ್ಲ, ಈಚಿನ ಸ್ಟೈಕೋರ್ಟ್ ತೀರ್ಮಾನದ ಪ್ರಕಾರ ಯಾವ ಯಾವ ಜಿಲ್ಲೆಯಲ್ಲಿ ಮಾರ್ಗಗಳು ಬರುತ್ತವೆ ಅವರು ಮತ್ತು ಆರ್. ಟಿ. ಎ. ಕೂಡಿ ಇತ್ಯರ್ಥ ಮಾಡಬೇಕು. If there is any objection that will be considered by the concerned appellate court, the STA and then the tribunal and thereafter if a writ petition is filed, by the High Court, and thereafter if they go to the Supreme Court, they will have to consider it. In spite of all this, they will have to be obtained the countersignature of the concerned State. Under the circumstances the procedure is very cumbersome. Under such circumstances these permits will have to be delayed. It is inevitable.

ಶ್ರೀ ಬಿ. ಚನ್ನಬೈರೇಗೌಡ.—ರಾಷ್ಟ್ರೀಕರಣ ಮಾಡಬೇಕು ಎನ್ನುವ ಸರ್ಕಾರದ ಧೋರಣೆ ಏನು ? 95 ಪರ್ಮಿಟ್‌ಗಳಲ್ಲಿ ಕೇವಲ 5 ಮಾತ್ರ ಸರ್ಕಾರವು ಸಾರಿಗೆ ಸಂಸ್ಥೆಗೆ ಕೊಟ್ಟಿದ್ದಾರೆ. 5 ಪರ್ಮಿಟ್‌ಗಳನ್ನು ಮಾತ್ರ ಕೊಟ್ಟು 90 ಸಂದರ್ಭಗಳಲ್ಲಿ ಏಕೆ ಕೊಡಲಿಲ್ಲ ಸ್ವಾಮಿ ?

ಶ್ರೀ ಆರ್. ಎಂ. ಪಾಟೀಲ್.—ಅವರು ಕೇಳಲಿಲ್ಲ ಎಂದು ಕೊಟ್ಟಿಲ್ಲ.

ಶ್ರೀ ಕೆ. ಎಸ್. ನೂರ್ಯನಾರಾಯಣರಾವ್.—ಮಾನ್ಯ ಮಂತ್ರಿಗಳು ಹೇಳಿದ ಕಂಬರಸಂ ಪ್ರೊಪೀಜರ್ ಬೆಂಗಳೂರು ಮತ್ತು ಕೋಲಾರ ಜಿಲ್ಲೆಯವರಿಗೆ ಬಹಳ ಸುಲಭವಾಗಿದೆ, ಬೇರೆಯವರಿಗೆ ಏಕೆ ಆಗಲಿಲ್ಲ ?

ಶ್ರೀ ಆರ್. ಎಂ. ಪಾಟೀಲ್.—ಸುಲಭವಾಗಿ ಆಗಿದೆ ಎಂದು ಮಾನ್ಯ ಸದಸ್ಯರ ಅಭಿಪ್ರಾಯವಾಗಿದೆ ಅಷ್ಟೆ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಕೋಲಾರದಲ್ಲಿ ಜಾಸ್ತಿ ಕೊಟ್ಟಿರುವುದಕ್ಕೆ ರೆವಿನ್ಯೂ ಮಂತ್ರಿಗಳ ಪ್ರಭಾವ ಕಾರಣವಲ್ಲವೇ ಸ್ವಾಮಿ.

Mr. SPEAKER.—I disallow it.

Disturbances in Bellary City.

*Q.—297. Sri T. G. SATYANARAYANA (Bellary).—

Will the Government be pleased to state :—

(*a*) whether disturbances took place in Bellary City on 25-9-1964 and 26-9-1964 and whether godowns were looted and whether there was any shooting ;

(*b*) what precautionary measures were taken by the Government to maintain law and order and to control the situation there ;

(SRI T. G. SATYANARAYANA)

(*c*) whether any steps have been taken against the persons responsible for the same;

(*d*) whether any relief has been given to persons who had lost their properties as a result of the disturbances ?

A.—Sri R. M. PATIL (Minister for Home).—

(*a*) some disturbances took place in Bellary Town on 25-9-1964 and there were a few incidents of looting of godowns. The Police had to open fire in self-defence on 25-9-1964.

No incident was reported on 26-9-1964.

(*b*) Necessary *bandobust* arrangements had been made. Prohibitory Order and Curfew had also been imposed.

(*c*) Yes.

(*d*) No.

ಶ್ರೀ ಟಿ. ಜಿ. ಸತ್ಯನಾರಾಯಣ.—25-9-1964 ಮತ್ತು 26-9-1964 ರಲ್ಲಿ ಗಲಭೆಯಾದ ಮೇಲೆ ಮುಂದಿನ ಕ್ರಮವನ್ನು ಸರ್ಕಾರ ಏನೇನು ತೆಗೆದುಕೊಂಡಿದೆ ಸ್ವಾಮಿ ?

Sri R. M. PATIL.—There was a police force kept there to maintain law and order in that town. Then additional police was also posted there. Thereafter there were no signs of any disturbance.

ಶ್ರೀ ಟಿ. ಜಿ. ಸತ್ಯನಾರಾಯಣ.—ಬಳ್ಳಾರಿ ಟೌನಿನಲ್ಲಿ ಗಲಭೆ ನಡೆದಾಗ ಅನೇಕ ನಾರಿ ಕೆಲವು ಪ್ರದೇಶಗಳಲ್ಲಿ ಗೋಲೀಬಾರು ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

Sri R. M. PATIL.—In one or two places or in half-a-dozen places it happened so.

Sri SANJEEVANATH AIKALA.—May I know how many persons lost their lives on account of police firing ?

Sri R. M. PATIL.—One person lost his life on the spot. Another person sustained injuries for which he was treated.

Sri C. J. MUCKANNAPPA. May I know the reasons that compelled the police to open fire.

Sri R. M. PATIL.—The mob were beyond control and they hurled stones. The police found that their strength was inadequate compared to the large mob. They had to open fire in the face of stones being hurled at them. It was done in self-defence and it was justifiable.

Sri T. G. SATYANARAYANA.—How many godowns were looted and how many persons were arrested and left on bail.

Sri R. M. PATIL.—19 godowns were affected. 268 persons were arrested and almost all of them were released on bail.

ಶ್ರೀ ಎನ್. ಎಂ. ಕೃಷ್ಣ.—ಈಗ ಆಹಾರದ ಉತ್ಪಟ ಅಭಾವದಿಂದ ಜನ ಅಶಾಂತಿಯುತರಾಗಿರುವುದರಿಂದ ಆ ಗಲಭೆ ನಡೆದ ಮೇಲೆ ಸರ್ಕಾರದವರು ಅಲ್ಲಿನ ಪ್ರಜೆಗಳಿಗೆ ಆಹಾರ ಪದಾರ್ಥಗಳನ್ನು ಸರಿಯಾದ ರೀತಿಯಲ್ಲಿ ಕೊಡತಕ್ಕ ಏರ್ಪಾಡುಗಳನ್ನು ಮಾಡಿದ್ದಾರೆಯೇ ?

Sri R. M. PATIL.—It is a complicated question. The first part of the question is an assumption and the second part is a querry. For the first part I would submit that food was not the main cause for this

rioting. It was due to the fact that the rioting was sponsored by the S.S.P. as part of their campaign to create trouble in the State.

[Interruptions]

Sri H. R. KESHAVA MURTHY.—I deny this charge most vehemently.

Sri R. M. PATIL.—As regards the second part of the question, arrangements were made wherever there was necessity to make available adequate supplies of foodgrains. Wherever there was need, food stocks were supplemented.

Sri S. RAJAGOPAL.—To find out the root cause, will the Government appoint a judicial enquiry?

Sri R. M. PATIL.—It is not necessary. Government have made certain enquiries and I have just given the conclusions.

ಶ್ರೀ ಎಸ್. ಎಂ. ಕೃಷ್ಣ —ಹಿಂದೆ ಬ್ರಿಟಿಷರ ಕಾಲದಲ್ಲಿ ಜನಗಳ ಮೇಲೆ ಎಲ್ಲಿ ಗುಂಡು ಹಾರಿಸಿದರೂ ಅಲ್ಲಿ ವಿಚಾರಣೆ ಮಾಡಬೇಕೆಂದು ಇದ್ದುದರಿಂದ, ಈಗ ಅಲ್ಲಿ ಅತ್ಯವಸರವಾಗಿ ನಡೆಸಲಾಗಿ ಗಳಾದಂಥ ಜನಗಳ ಮೇಲೆ ಗುಂಡು ಹಾರಿಸುವಾಗ ವಿಚಾರಣೆ ಮಾಡಬೇಕೆಂದು ಹೇಳಿದರೆ, ವಿಚಾರಣೆ ಅಗತ್ಯವಿಲ್ಲ ಎಂದು ಹೇಳಿದ ಈ ಸರ್ಕಾರದ ಧೋರಣೆಯ ಏನೆಂಬುದು ... .

Mr. SPEAKER.—The recent ruling on the use of the word "ಧೋರಣೆ" must be remembered by the Hon'ble Member.

Sri S. M. KRISHNA.—I withdraw it unconditionally. I meant no offence. ಇನ್ನು ತಾತ್ವಿಕವಾಗಿ ಹೇಳುವುದಾದರೆ, ಜನಗಳ ಮೇಲೆ ಗುಂಡು ಹಾರಿಸುವ ಪರಿಸ್ಥಿತಿ ಬಂದರೆ ಅಂತಹ ಸಮಯದಲ್ಲಿ ನ್ಯಾಯಾಂಗ ವಿಚಾರಣೆ ನಡೆಸುತ್ತೀರಾ?

Sri R. M. PATIL.—It is a hypothetical question.

Sri J. P. SARWESH.—May I know the total amount of foodgrains looted?

Sri R. M. PATIL.—In all 19 godowns, excepting one for which no statement of loss is available, the total reported loss is Rs. 1,32,000 worth. It is quite possible that this figure is exaggerated by persons who gave the statement.

ಶ್ರೀ ಎಚ್. ಆರ್. ಕೇಶವಮೂರ್ತಿ. —ಕೆಲವು ಸಾಹುಕಾರರುಗಳು ಸರ್ಕಾರದ ಬೆಂಬಲ ಪಡೆದು ಬಡವರಿಗೆ ಅನ್ನಕೊಡದೆ ಬಡವರು ಸಾಯುತ್ತಿರುವ ಪರಿಸ್ಥಿತಿ ಬರುವುದಕ್ಕೆ ಕೇವಲ ಕೆಲವು ಖದೀಮರು ಕೆಳದರ್ಜೆ ನೌಕರರೊಡನೆ ಸೇರಿಕೊಂಡು ಈ ರೀತಿ ಲೂಟಿ ಮಾಡಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

Sri R. M. PATIL.—It is far from truth.

ಶ್ರೀ ಟಿ. ಜಿ. ನಂಜುಂಡಯ್ಯ.—ಬಳ್ಳಾರಿ ಮೈತುಂಬಿನಲ್ಲಿ 'ಮರ್ಜ್' ಆದಾಗ ಬಳ್ಳಾರಿ ಜಿಲ್ಲೆಗೆ ಪೋಲೀಸ್ ಸ್ಟ್ರೆಂಗ್ತ್ ಎಷ್ಟು ಇತ್ತು, ಈಗ ಎಷ್ಟಿದೆ, ಮುಂದೆ ಅದನ್ನು ಹೆಚ್ಚು ಮಾಡುವುದಕ್ಕೆ ಏನಾದರೂ ಸ್ಕೋಪ್ ಇದೆಯೇ?

Sri R. M. PATIL.—The police force in Bellary was reduced as a result of reorganisation in 1960-61. Since Bellary District was not considered turbulant it required no additional police force. However, on account of this disturbance, we have posted reserve police as a temporary measure.

ಶ್ರೀ ಸಿದ್ದಯ್ಯ ಕಾಶೀಮಠ.—19 ಗೋಡೌನುಗಳಲ್ಲಿ ಲೂಟಿಯಾಗಿದೆ ಎಂಬುದಾಗಿ ಮಾನ್ಯ ಮಂತ್ರಿಗಳು ಉತ್ತರ ಹೇಳಿದರು. ಆ 19 ಗೋಡೌನುಗಳ ಮಾಲೀಕರ ಪೈಕಿ ಎಷ್ಟು ಮಂದಿ ಡಿಕ್ಲರೇಷನ್ ಕೊಟ್ಟಿದ್ದರು, ಸ್ಟಾಕ್ ಎಷ್ಟಿತ್ತು?

Sri R. M. PATIL.—The statement of propery lost—a copy of which I am placing on the Table of the House—which reveals that foodgrains were looted only from a few godowns. Articles other than foodgrains were looted. This only goes to show that the motive for looting is something else.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ತಾವು ಬೇಕಾದರೆ ಪ್ರೊಸೀಡಿಂಗ್ಸ್ ನೋಡಿ, ತಮ್ಮ ಕಾಲದಲ್ಲಿ ನಾನು ಮಾತನಾಡಿದೇ ಇರುವುದೇ ಆಗಿದೆ.

Mr. SPEAKER.—I make a final request to the Hon'ble Member. He must not disturb too often because it distracts my attention. He goes on making comments also. Let him not repeat it. It is difficult for me to concentrate if such things happen.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಪೋಲೀಸರ ಮನೆಯಲ್ಲಿ...

Mr. SPEAKER.—If the Member wants I will give him a copy of all the proceedings. He is the only member who has been allowed to put the largest number of supplementaries.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಉತ್ತರವನ್ನು ಸ್ಪೆಸಿಫಿಕ್ಕಾಗಿ ಅವರು ಹೇಳಬೇಕು.

Mr. SPEAKER.—I will ask him to analyse himself.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಈ ಲೂಟಿಯಾದ ಮೂರುನಾಲ್ಕು ದಿವಸಗಳಾದ ಮೇಲೆ ಪೋಲಿಸರ ಮನೆಯಲ್ಲಿ ಎಷ್ಟು ಮೂಟೆ ಗೋಧಿ ಸಿಕ್ಕಿತು. ಪೋಲೀಸರ ಮುಂದೆ ಮೆರವಣಿಗೆ ಹೋದಾಗ ನಮ್ಮ ಹತ್ತಿರ ಏಕೆ ಬರುತ್ತೀರಿ; ಅಂಗಡಿ ಹತ್ತಿರ ಹೋಗಿ ಎಂಬುದಾಗಿ ಹೇಳಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೆ?

Sri R. M. PATIL.—I have already submitted that such an allegation is far from truth. May I submit that 19 cases are pending before a court and the matter is *subjudice*. It is not advisable that I should furnish any more details.

Sri R. S. HEGDE.—Will the Government contemplate levy of community tax on the village with a view to arrest such incidents.

Sri R. M. PATIL.—Unless there is an occasion, this is not necessary.

Obstacles for the free flow of water in Bijapur City.

*Q.—158. Sri J. L. KABADI (Baradol).—

Will the Government be pleased to state :—

(*a*) whether it is not a fact that the sudden and heavy flow of water in the Bijapur City was mainly due to the unauthorised obstacles placed (bunds on the sites) across the free water flow along the fort-wall on the western side of the City ;

(*b*) whether it is a fact that the persons cultivating the lands along the fort-wall (canal) of western side of the City have put bunds unauthorisedly ;

(*c*) the steps taken by the Municipality and the Government or giving free passage to heavy flow of water?